ಮೊತ್ತ ಎಷ್ಟು?

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು):

ಅ) 380956

ವಸತಿ - 279464.

ವಾಣಿಜ್ಯ - 72247.

ಇತರೆ - 29245.

ಆ) 1987-88ರಲ್ಲಿ ಪುನರ್ವಿಮರ್ಶಿಸಿ ಜಾರಿಗೊಳಿಸಲಾಗಿದೆ.

ಇ) ವಸೂಲಾತಿ - 117.32 ಕೋಟಿ.

ಬಾಕಿ - 67.68 ಕೋಟಿ

ನಗರಪಾಲಿಕೆ ವ್ಯಾಪ್ತಿಯ ಆಸ್ತಿ ತೆರಿಗೆ ಪಾವತಿಸದೇ ಇರುವುದರ ಬಗ್ಗೆ.

2192(2980)

ಶ್ರೀ ಆರ್. ಅಶೋಕ್ (ಉತ್ತರಹಳ್ಳಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಬಹಳಷ್ಟು ವಸತಿ ಗೃಹಗಳು, ಖಾಲಿ ನಿವೇಶನಗಳು, ಕೈಗಾರಿಕಾ ನಿವೇಶನಗಳು, ಕೈಗಾರಿಕೆಗಳು, ವಾಸದ ಮನೆಗಳು, ಹಾಗೂ ವಾಣಿಜ್ಯ ಸಂಕೀರ್ಣಗಳು ಆಸ್ತಿ ತೆರಿಗೆ ಪಾವತಿಸದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ಪಾವತಿ ಮಾಡದೇ ಇರುವ ಆಸ್ತಿ ತೆರಿಗೆ ಮೊತ್ತವೆಷ್ಟು? ಈ ಬಾಕಿಯನ್ನು ಬಡ್ಡಿ ಸಮೇತ ವಸೂಲಿ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೆ?

ಇ) ನಗರಪಾಲಿಕೆ ಅಧಿಕಾರಿಗಳು ಶಾಮಿಲಾದ ಕಾರಣ ಈ ರೀತಿ ಆಸ್ತಿ ತೆರಿಗೆ ವಂಚನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಮಹಾನಗರಪಾಲಿಕೆ ಸಿಬ್ಬಂದಿಯನ್ನು ಒಂದು ನಗರ ಪಾಲಿಕೆಯಿಂದ ಮತ್ತೊಂದು ನಗರ ಪಾಲಿಕೆಗೆ ವರ್ಗಾವಣೆ ಮಾಡುವ ವಿಚಾರವನ್ನು ಸರ್ಕಾರ ಪರಿಶೀಲಿಸುತ್ತಿದೆಯೇ?

ಈ) ಬಾಕಿ ಇರುವ ಆಸ್ತಿ ತೆರಿಗೆ ಪ್ರಮಾಣ ಎಷ್ಟು? ಎಂದು ಈ ಹಣ ವಸೂಲಿ ಮಾಡಲಾಗುವುದು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) ಹೌದು.

ಆ) ರೂ.67.68 ಕೋಟಿಗಳು ನಿಗಧಿತ ಅವಧಿಯೊಳಗೆ ವಸೂಲಿ ಮಾಡಲಾಗುತ್ತಿದೆ.

ಇ) ಇಲ್ಲ. ವರ್ಗಾವಣೆ ವಿಷಯವು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.

ಈ) ರೂ.67.68 ಕೋಟಿಗಳು. ಬಾಕಿ ತೆರಿಗೆಯನ್ನು ತ್ವರಿತವಾಗಿ ವಸೂಲಿ ಮಾಡಲಾಗುವುದು.

ಬೆಂಗಳೂರು ನಗರದಲ್ಲಿ ಆಸ್ತಿ ತೆರಿಗೆ ನೀಡದೇ ಇರುವವರ ಸಂಖ್ಯೆ.

2193(2981)

ಶ್ರೀ ಆರ್.ಅಶೋಕ್ (ಉತ್ತರಹಳ್ಳಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆಸ್ತಿ ತೆರಿಗೆ ನೀಡದೇ ಇರುವವರ ಸಂಖ್ಯೆ ಎಷ್ಟು?

ಆ) ಪಿ.ವಾಸುದೇವ ಸಮಿತಿ ವರದಿಯನ್ನು ಸರ್ಕಾರಕ್ಕೆ ಎಂದು ನೀಡಿದೆ? (ಈ ವರದಿಯ ಪ್ರತಿ ಒದಗಿಸುವುದು)

ಇ) ಈ ವರದಿಯನ್ನು ಅಂಗೀಕರಿಸಲಾಗಿದೆಯೇ?

ಈ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) ಶೇಕಡಾ 35 ರಷ್ಟು.

ಆ, ಇ ಮತ್ತು ಈ) 30-12-1996. ವರದಿಯು ಪರಿಶೀಲನೆಯಲ್ಲಿರುತ್ತದೆ ಮತ್ತು ವರದಿಯ ಪ್ರತಿಯನ್ನು ನಂತರ ಒದಗಿಸಲಾಗುವುದು.